# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 407 |
| ಸದಸ್ಯರ ಹೆಸರು | : ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶಿತರು) |
| ಉತ್ತರಿಸುವ ದಿನಾಂಕ | : 29.01.2026 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ಜಿಲ್ಲೆಯಲ್ಲಿ ಯಾವ ನದಿಗಳಿಗೆ ಎಷ್ಟು ಏತ ನೀರಾವರಿಗಳಿವೆ ಮತ್ತು ಎಷ್ಟು ಪ್ರಮಾಣದ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ: (ವಿವರ ನೀಡುವುದು); | ಕರ್ನಾಟಕ ನೀರಾವರಿ ನಿಗಮ ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮಗಳ ವ್ಯಾಪ್ತಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿನ ಏತ ನೀರಾವರಿ ಯೋಜನೆಗಳ ವಿವರ ಕೆಳಗಿನಂತಿವೆ:- (ಕೆಳಗಿನ ಕೋಷ್ಟಕ ನೋಡಿ) |
| (ಆ) | ಸರ್ಕಾರ ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದರೂ ರೈತರ ಹೊಲಗಳಿಗೆ ನೀರಿನ ಪೂರೈಕೆ ಮಾಡದೆ ನಿಷ್ಕ್ರಿಯಗೊಂಡಿರುವ ಏತ ನೀರಾವರಿಗಳೆಷ್ಟು; | |
| (ಇ) | ನಿಷ್ಕ್ರಿಯಗೊಂಡಿದ್ದರು ಅವುಗಳನ್ನು ಅಭಿವೃದ್ಧಿಪಡಿಸಿ ಬರಗಾಲದ ಜಿಲ್ಲೆಯಾದ ಕಲಬುರಗಿ ರೈತರ ಹೊಲಗಳಿಗೆ ನೀರು ಪೂರೈಕೆ ಮಾಡದಿರಲು ಕಾರಣಗಳೇನು; | |
| (ಈ) | ಜಿಲ್ಲೆಯಲ್ಲಿ ಹಲವು ವರ್ಷಗಳು ಚೆನ್ನಾಗಿ ಮಳೆ ಬಂದರೂ ಏತ ನೀರಾವರಿಗಳ ನಿಷ್ಕ್ರಿಯತೆಯಿಂದ ನೀರು ಬಳಸದೆ ರೈತರ ಬದುಕಿನೊಂದಿಗೆ ಚೆಲ್ಲಾಟವಾಡಿದಂತಲ್ಲವೇ; ದುರಸ್ತಿ ಹೆಸರಲ್ಲಿ ಕೋಟಿಗಟ್ಟಲೆ ಹಣ ವ್ಯಯ ಮಾಡಿದವರ ಕುರಿತು ತನಿಖೆ ಕೈಗೊಳ್ಳಬಹುದೇ: | |
| (ಉ) | ಜಿಲ್ಲೆಯಲ್ಲಿ ನಿಷ್ಕ್ರಿಯಗೊಂಡಿರುವ ಏತ ನೀರಾವರಿಗಳನ್ನು ತಕ್ಷಣವೇ ಸೂಕ್ತ ದುರಸ್ತಿ/ಯಂತ್ರಗಳನ್ನು ಅಳವಡಿಸಿ ಕಂಗಾಲಾದ ರೈತರ ಹೊಲಗಳಿಗೆ ನೀರು ಹರಿಸಲು ಸರಕಾರ ಕ್ರಮ ಕೈಗೊಳ್ಳುವುದೇ? | ಎರಡೂ ನಿಗಮಗಳಡಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ನಿಷ್ಕ್ರಿಯಗೊಂಡಿರುವ ಏತ ನೀರಾವರಿ ಯೋಜನೆಗಳು ಇರುವುದಿಲ್ಲ. |

| ಯೋಜನೆಯ ಹೆಸರು | ಯೋಜಿತ ನೀರಾವರಿಕ್ಷೇತ್ರ (ಹೆಕ್ಟೇರ್) | ಕಲ್ಪಿಸಲಾದ ನೀರಾವರಿ ಸಾಮರ್ಥ್ಯ (ಹೆಕ್ಟೇರ್) | ಪ್ರಸ್ತುತ ಹಂತ |
|---|---|---|---|
| ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಮಲ್ಲಾಬಾದ್ ಏತ ನೀರಾವರಿ ಯೋಜನೆ (ಕೃಷ್ಣಾ ನದಿ) | 33,730 | 5,530 | ಮುಖ್ಯಸ್ಥಾವರ ಮತ್ತು ಶಾಖಾ ಕಾಲುವೆಗಳು ಪೂರ್ಣಗೊಂಡಿದ್ದು, ವಿತರಣಾ ಕಾಲುವೆ ಕಾಮಗಾರಿ ಪ್ರಗತಿಯಲ್ಲಿದೆ. |
| ಸನ್ನತಿ ಏತ ನೀರಾವರಿ ಯೋಜನೆ (ಭೀಮಾ ನದಿ) | 16,100 (ಕಲಬುರಗಿ & ಯಾದಗಿರಿ) | 4,450 (ಕಲಬುರಗಿ) | ಕಾಮಗಾರಿ ಪ್ರಗತಿಯಲ್ಲಿದೆ. |
| ಇಟಗಾ ಸಂಗಮ ಏತ ನೀರಾವರಿ ಯೋಜನೆ | 1200 | 1200 | ಪೂರ್ಣಗೊಂಡಿದೆ. |
| ಐನಾಪುರ ಏತ ನೀರಾವರಿ ಯೋಜನೆ (ಮುಲ್ಲಾಮಾರಿ ನದಿ) | 3,710 | - | ಕಾಮಗಾರಿ ಪ್ರಾರಂಭಿಕಾ ಹಂತದಲ್ಲಿದೆ. |
| ಯಡ್ರಾಳ್ಳಿ ಮತ್ತು ತೆರ್ನಳ್ಳಿ ಏತ ನೀರಾವರಿ ಯೋಜನೆ (ಕಾಗಿಣಾ ನದಿ) | 4,105 | - | ಕಾಮಗಾರಿ ಪ್ರಗತಿಯಲ್ಲಿದೆ. |
| ಸೊನ್ನ ಏತ ನೀರಾವರಿ ಯೋಜನೆ (ಭೀಮಾ ನದಿ) | 24,292 | 24,292 | ನೀರಾವರಿ ಸೌಲಭ್ಯ ಒದಗಿಸಲಾಗಿದೆ. |

ಜಸಂಇ 22 ಎಂಎಲ್ಎ 2026

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ